**OS: 57/2022**
**P.W-1**

**<u>ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕೂಡ್ಲಿಗಿ</u>**

ದಿನಾಂಕಃ 30.01.2026 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲು ಪ್ರತಿವಾದಿ ನಂಃ 1 ಮತ್ತು 2 ರವರ ಪರ ವಕೀಲರಿಂದ</u>**

ಸದರಿ ನಾಗಮ್ಮ, ಗೌರಮ್ಮ ಮತ್ತು ಕರಿಬಸಮ್ಮರವನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಅವರನ್ನು ಮುಂದೆ ಸೇರಿಸುತ್ತೇವೆ. ಪ್ರತಿವಾದಿ ನಂಃ 1 ಮತ್ತು 2 ರವರ ತಾಯಿಯ ಹೆಸರಿಗೆ ಯಾವಾಗ ಖಾತೆ ಬಂದಿವೆ ಎಂಬುದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ಪ್ರತಿವಾದಿ ನಂಃ 1 ಮತ್ತು 2 ರವರ ತಂದೆಯ ಹೆಸರಿಗೆ ಸರ್ಕಾರದಿಂದ ಪಟ್ಟಾ ಕೊಟ್ಟಿದ್ದರು ಎಂದರೆ ಸರಿ. ಅಮ್ಮನಕೆರೆ ಬಸಪ್ಪ ಮತ್ತು ಅವರ ಸಹೋದರರು ಒಟ್ಟಿಗೆ ಇದ್ದಾಗ ಪಟ್ಟಾ ಕೊಟ್ಟಿರುತ್ತಾರೆ. ದಾವಾ ಸ್ವತ್ತುಗಳಲ್ಲಿ ಯಾವ-ಯಾವ ಆಸ್ತಿಗೆ ಸಂಬಂಧಿಸಿದಂತೆ ಜಂಟಿಯಾಗಿ ಪಟ್ಟಾ ಕೊಟ್ಟಿದ್ದಾರೆ ಗೊತ್ತಾ ಎಂದರೆ 4 ಆಸ್ತಿಗಳಿಗೆ ಪಟ್ಟಾ ಕೊಟ್ಟಿದ್ದಾರೆ, 2 ಆಸ್ತಿಗಳನ್ನು ಅಮ್ಮನಕೆರೆ ಬಸಪ್ಪ ಮತ್ತು ಅವರ ಸಹೋದರರು ಒಟ್ಟಿಗೆ ಖರೀದಿ ಮಾಡಿರುತ್ತಾರೆ. ಯಾವಾಗ ಎಂಬುದು ನನಗೆ ಗೊತ್ತಿಲ್ಲ. ಯಾರಿಂದ ಎಷ್ಟನೆ ಇಸವಿಯಲ್ಲಿ ಯಾರ ಹೆಸರಿನಲ್ಲಿ ಖರೀದಿ ಮಾಡಿದ್ದಾರೆ ಎಂದರೆ ಅಮ್ಮನಕೆರೆ ಬಸಪ್ಪನವರ ಸಹೋದರರು ಎಲ್ಲಾರು ಸೇರಿ ಅಮ್ಮನಕೆರೆ ಬಸಪ್ಪನವರ ಹೆಸರಿನಲ್ಲಿ ಖರೀದಿ ಮಾಡಿರುತ್ತಾರೆ. ಯಾರಿಂದ ಖರೀದಿ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ.

ದಾವಾ ಅನುಸೂಚಿ 3 ರಿಂದ 5 ರ ಆಸ್ತಿಗಳನ್ನು ಬಸಪ್ಪ, ಸಿದ್ದಪ್ಪ, ಹನುಮಂತಪ್ಪರವರು ನಿಂಗಪ್ಪ ಮತ್ತು ಓಬಪ್ಪನವರಿಗೆ ದಿಃ 16.06.1964 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿಃ 11.12.1974 ರಲ್ಲಿ ಪ್ರತಿವಾದಿ ನಂಃ 1 ಮತ್ತು 2 ರವರ ತಂದೆ ಸ್ವರೂಪ್ ಸಿಂಗ್ ರವರಿಗೆ ದಾವಾ ಅನುಸೂಚಿ 1 ಮತ್ತು 2 ರ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರಗಳ ಆಧಾರದ ಮೇಲೆ ಮುಟೇಷನ್ ಆಗಿದ್ದು ಅದನ್ನು ನನ್ನ ತಂದೆಯಾವರಾಗಲಿ, ನಾವಾಗಲಿ ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ಪ್ರತಿವಾದಿ ನಂಃ 1 ಮತ್ತು 2 ರವರ ತಾಯಿ ದಾವಾ ಅನುಸೂಚಿ 3 ರಿಂದ 5 ರವರ ಆಸ್ತಿಗೆ ಸಂಬಂಧಿಸಿದಂತೆ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಕೂಡ್ಲಿಗಿಯಲ್ಲಿ ಓಸ್.ಎಸ್ ನಂಃ 198/2018 ರಂತೆ ದಾವೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯು ರಾಜಿ ಡಿಕ್ರಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

1950 ರಲ್ಲಿ ಬಸಪ್ಪ, ಸಿದ್ದಪ್ಪ, ಹನುಮಂತಪ್ಪರವರ ನಡುವೆ ಮೌಖಿಕವಾಗಿ ವಿಭಾಗವಾಗಿದ್ದು ಅದರಂತೆ ಅವರವರ ಭಾಗಕ್ಕೆ ಬಂದಂತಹ ಆಸ್ತಿಗಳನ್ನು ಕೆಲವು ಆಸ್ತಿಗಳನ್ನು ಮಾರಾಟ ಮಾಡಿ ಕೆಲವು ಆಸ್ತಿಗಳನ್ನು ಕ್ರಯಕ್ಕೆ ಪಡೆದಿರುತ್ತಾರೆ ಹಾಗಾಗಿ ಈಗಾಗಲೆ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ವಿಭಾಗ ಆಗಿ ಆ ವಿಭಾಗದ ಆಧಾರದ ಮೇಲೆ ಕಾರ್ಯಪ್ರವೃತ್ತರಾಗಿರುವುದರಿಂದ ಯಾವುದೇ ಭಾಗಾಂಶ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ 6 ರ ಆಸ್ತಿ ಕರಿಬಸಪ್ಪನವರ ಹೆಸರಿನಲ್ಲಿ ಇದೆ. ಎಲ್ಲಾ ವಿಚಾರ ಗೊತ್ತಿದ್ದರು ಸಹ ಪ್ರತಿವಾದಿಗಳಿಗೆ ತೊಂದರೆ ಕೊಡುಬೇಕೆಂಬ ಕಾರಣಕ್ಕೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ಪ್ರತಿವಾದಿ ನಂಃ 3 ರಿಂದ 7 ರವರ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

**ಓ,ಹೇ,ಕೇ,ಸರಿ ಇದೆ.**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**